

# ವಾವ್..ಇದು ಬೊಮ್ಕಾಯ್ ಸೀರೆ!

ಒರಿಸ್ಸಾ ಮೂಲದ ಬೊಮ್ಕಾಯ್ ಸೀರೆಗಳ ವಿನ್ಯಾಸ ವಿಭಿನ್ನ ಮತ್ತು ಆಕರ್ಷಕ. ಕಣ್ಸೆಳೆಯುವ ಬಣ್ಣಗಳಿಂದ, ಎಂಬ್ರಾಯಿಡರಿ ಮತ್ತು ಕುಸುರಿ ಕಲೆಗಳಿಂದ ಕೂಡಿದ ಈ ಸೀರೆ ಸಿನಿಮಾ ನಟಿ, ಸೆಲೆಬ್ರಿಟಿಗಳಿಂದ ಹಿಡಿದು ಸಾಮಾನ್ಯ ಮಹಿಳೆಯೂ ಇಷ್ಟಪಡುವಂತಿದೆ.

■ ಯು. ಅನಂತ್

ಸೀರೆಯಲ್ಲಿ ವೈವಿಧ್ಯ ನೂರಾರು. ವಿನ್ಯಾಸದಲ್ಲಿಯೂ ಹಲವು ಬಗೆ. ಸಂಪ್ರದಾಯಕ್ಕೆ, ಫ್ಯಾಷನ್‌ಗೆ, ನೃತ್ಯಪಟುಗಳಿಗೆ, ಆಧುನಿಕ ಮನೋಭಾವದ ಮಹಿಳೆಯರಿಗೆ, ಸೆಲೆಬ್ರಿಟಿಗಳಿಗೆ, ಸಿನಿಮಾ ತಾರೆಗಳಿಗೆ.. ಹೀಗೆ ಸಮಾಜದ ಎಲ್ಲ ಸ್ತರದ ಮಹಿಳೆಯರಿಗೆ ಸೂಕ್ತವಾಗುವಂಥ ಬೊಮ್ಕಾಯ್ ಸೀರೆಗಳು ಬಹಳ ಬೇಗ ಜನಪ್ರಿಯವಾಗುತ್ತಿದೆ. ಕೈಮಗ್ಗದ ಉಡುಪುಗಳಿಗೆ ಹೆಸರಾದ ಒರಿಸ್ಸಾದಲ್ಲಿ ಇದೀಗ ಬೊಮ್ಕಾಯ್ ಸೀರೆಗಳದ್ದೇ ದರ್ಬಾರು.

ಸಾಂಪ್ರದಾಯಿಕ ಮತ್ತು ಆಧುನಿಕ ಮನೋಭಾವದ ಯುವತಿಯರ ಮನ ಸೆಳೆಯಲೆಂದೇ ಬಂದಿರುವ ಬೊಮ್ಕಾಯ್ ಸೀರೆಗಳು ಎಥ್ನಿಕ್ ಉಡುಪಿನಂತೆ ಶೋಭಿಸುತ್ತಿವೆ. ಈ ಸೀರೆಗಳು ಸಾಂಪ್ರದಾಯಿಕತೆಯನ್ನು ಮೀರದೆ ಆಧುನಿಕ ಟ್ರೆಂಡ್‌ನೊಂದಿಗೆ ರಾಜಿ ಮಾಡಿಕೊಳ್ಳದೆ ಇಂದು ಯುವತಿಯರ ಮನಗೆಲ್ಲುತ್ತಿವೆ. ಈ ಉಡುಗೆಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಧರಿಸಬಹುದು. ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ, ಫ್ರೆಂಡ್‌ಶಿಪ್ ಡೇ, ವ್ಯಾಲಂಟೇನ್ ಡೇ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನಗಳಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ, ಬೊಮ್ಕಾಯ್‌ಸೀರೆ

